ಗಳ ಫಾಕ್ಟ್ಸ್ ಬಗ್ಗೆ ನಾನು ಏನೂ ಹೇಳುವ ಹಾಗೆ ಇಲ್ಲ, ಮತ್ತು ಹೇಳುವುದು ಸಮಂಜಸವೂ ಅಲ್ಲ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಯಾರೋ ಪೋಲೀಸಿನವರು ಯಾರುಯಾರದೋ ಹೆಸರುಗಳನ್ನು ಬರೆದಿದ್ದಾರೆ ಎಂಬ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಮತ್ತು ನಮ್ಮ ಒಬ್ಬ ಡೆಪ್ಯುಟಿ ಮಂತ್ರಿಗಳು ಹಳ್ಳಿಯಲ್ಲಿ ಜನಗಳ ಮೇಲೆ ಯಾವುದೋ ಒಂದು ಎಲೆಕ್ಷನ್ ಸ್ಟಂಟ್ ಎಂದು ಈ ರೀತಿ ಮಾಡಿಸುತ್ತಾ ಇದ್ದಾರೆ ಎನ್ನತಕ್ಕಂಥ ವಿಚಾರವನ್ನು ಹೇಳಿದರು. ಈ ವಿಚಾರ ಸಬ್‌ಜುಡಿಸ್ ಆದುದರಿಂದ ನಾನು ಮೊದಲೇ ಹೇಳಿರುವಂತೆ ಏನೂ ಹೇಳುವ ಹಾಗಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ. ಪಾರ್ಟಿ ಫ್ರಿಕ್ಷನ್, ರೈವಲ್‌ರೀಸ್ ಬಹಳ ಇವೆ. ಮತ್ತು ಈಗ ಯಾರು ಯಾರು ಗಡಿಸಲುಗಳಿಗೆ ಮತ್ತು ಹೇ ಸ್ಟ್ಯಾಕ್‌ಗಳಿಗೆ ಬೆಂಕಿ ಹಚ್ಚಿ ಅನಾಹುತ ಮಾಡಿದ್ದಾರೋ ಅವರನ್ನು ಬಂಧಿಸಿ ಅವರ ಮೇಲೆ ಕೇಸ್ ರಿಜಿಸ್ಟರ್ ಆಗಿದೆ. ಇಂತಹವರೇ ಮಾಡಿದ್ದಾರೆಂದು ಇನ್‌ವೆಸ್ಟಿಗೇಟ್ ಆಗಿ ಅವರ ಮೇಲೆ ಚಾರ್ಜ್ ಷೀಟ್ ಹಾಕಲಾಗಿದೆ. ಅದು ಕೋರ್ಟಿನಲ್ಲಿರುವುದರಿಂದ ಈಪೊತ್ತು ಈ ಫ್ಯಾಕ್ಟ್ಸ್ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ. ನಮ್ಮ ಡೆಪ್ಯುಟಿ ಮಿನಿಷ್ಟರ್ ಮೇಲೆ ಶ್ರೀಮಾನ್ ಹುಚ್ಚಮಾಸ್ತಿಗೌಡರು ಅವರು ಹನ್ನತ್ಕ್ಷೇಪ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾನು ಅವನ್ನು ಒಪ್ಪುವುದಕ್ಕಾಗುವುದಿಲ್ಲ. ಹಳ್ಳಿಗಳಲ್ಲಿ ಇನ್ನು ಏನು ಅನಾಹುತಗಳಾಗದಂತೆ ನೋಡಿಕೊಳ್ಳಲು ಈಗಾಗಲೇ ಮೇಲಿಂದಮೇಲೆ ಪೋಲೀಸ್ ಡಿಪಾರ್ಟ್‌ಮೆಂಟಿನಿಂದ ಎಸ್. ಪಿ., ಡಿ. ಎಸ್. ಪಿ. ಸರ್ಕಲ್ ಇನ್‌ಸ್ಪೆಕ್ಟರ್ ಅವರು ಹೋಗುತ್ತಿದ್ದಾರೆ ಮತ್ತು 107ನೇ ಕಲಂ ಪ್ರಕಾರ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಏರ್ಪಾಡುಮಾಡಿದ್ದಾರೆ. ಅದಕ್ಕಾಗಿ ಸರಕಾರವಾಗಲಿ, ನನ್ನ ಮಂತ್ರಿಮಂಡಲದಲ್ಲಿರುವ ಯಾವುದೇ ಸದಸ್ಯರಾಗಲಿ, ಯಾರದೂ ಹನ್ನತ್ಕ್ಷೇಪ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ.—ಸರ್ಕಾರದವರು ಸಾವಿರಾರು ರೂಪಾಯಿಗಳು ನಷ್ಟವಾಗಿದೆ ಎಂದು ಹೇಳಿದ್ದಾರೆ. ನಷ್ಟ ಆದವರಿಗೆ ಏನಾದರೂ ಕಾಂಪನ್ಸೇಷನ್ ಕೊಡಲಾಗಿದೆಯೆ?

ಶ್ರೀ ವೀರೇಂದ್ರ ಪಾಟೀಲ್.—ಯಾರು ಬೆಂಕಿ ಹಚ್ಚಿದರು, ಯಾರು ಅನಾಹುತಕ್ಕೆ ಕಾರಣರು ಎಂಬ ಪ್ರಶ್ನೆಗಳು ಕೋರ್ಟಿನ ಮುಂದೆ ಇವೆ. ಅವು ಕೋರ್ಟಿನಲ್ಲಿರುವುದರಿಂದ ಈ ವಿಷಯುಲ್ಲ ನಾನು ಏನೂ ಹೇಳುವ ಪರಿಸ್ಥಿತಿಯಲ್ಲಿ ಇಲ್ಲ. ಕಾಂಪನ್‌ಸೇಷನ್ ಕೊಡಬೇಕೇ, ಹೇಗೆ ಕೊಡಬೇಕು, ಯಾತಕ್ಕೆ ಕೊಡಬೇಕು, ಯಾವ ಬಾಬಿನಿಂದ ಕೊಡಬೇಕು ಎಂಬ ಪ್ರಶ್ನೆ ಕೋರ್ಟಿನಲ್ಲಿ ನಿರ್ಣಯವಾದ ಮೇಲೆ ಉದ್ಭವಿಸುತ್ತದೆ.

re : incidents on 1st February 1970 in some parts of Bangalore City

ಶ್ರೀ ಎಸ್. ಆರ್. ಷಣ್ಮುಗಂ (ಕೆ. ಜಿ. ಎಫ್.).—ತಾ. 1-2-1970 ರಲ್ಲಿ ಬೆಂಗಳೂರು-ಸಿಟಿಯ ಕೆಲವು ಭಾಗಗಳಲ್ಲಿ ಈ ಕನ್ನಡ ಚಳುವಳಿಗಾರರು ಗುಡಿಸಲುಗಳಿಗೆ ಬೆಂಕಿ ಹಚ್ಚುವುದು, ಅಂಗಡಿಗಳಿಗೆ ಮತ್ತು ಬಸ್ಸುಗಳಿಗೆ ಕಲ್ಲು ಹೊಡೆಯುವುದು ಮುಂತಾದ ಕೆಟ್ಟ ಚಟುವಟಿಕೆಗಳನ್ನು ಮಾಡಿರುವುದರಿಂದ ತಮಿಳರಿಗೆ ಬಹಳ ಅನ್ಯಾಯವಾಗಿ ಗಾಬರಿ ಆಗಿದೆ. ಆ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಕ್ಕ ಹೇಳಿಕೆ ಕೊಡಬೇಕು.

† Sri VEERENDRA PATIL.—Sir, to protest against the arrest of Tamil Nadu Police, of Sri Vatal Nagaraj, M.L.A., at Talavadi, Coimbatore District, various Kannada Associations in the City held demonstrations and took out processions on 1st February 1970.

On the morning of 1st February 1970 about 1,000 persons went in a procession from Mysore Bank Circle with an effigy of the Chief Minister of Tamil Nadu. As they proceeded on the Avenue Road and Narasimharaja Road some of the processionists pulled out calendars with photographs of Tamil Nadu leaders and tore them to piecces. City and Naaz Cinema Theatres were pelted at. An attempt was made to pull down a banner near a petrol bunk. Wherever the crowd showed a tendency to indulge in mischief, they were chased away by the Police. Finally, the procession reached Shivaji Nagar Stadium at about 12 noon and set fire to

(SRI VEERENDRA PATIL)

the effigy and started dispersing. But few urchins among them pulled out a cinema poster of Sri M. G. Ramachandran and set fire to the same. The Police party chased away the crowd there also.

Another batch began to assault a sugarcane vendor near the Secretariat Circle and a few of them got into the Press Canteen and tilted a pan of hot oil. Two persons got burn injuries as a result and were admitted to the hospital. The Police rushed to the spot and prevented further trouble.

At 2-00 p.m. a few persons collected near Geetha Talkies and began to pelt stones at the Tamil posters. The crowd was cleared. In Binnypet some persons set fire to a portrait of the Tamil Nadu Chief Minister and others. A portrait of Sri Vatal Nagaraj was set fire to, in retaliation by some others. When the crowd was chased, some of them pelted stones at Anjan Theatre and broke a few panes.

At about 4-00 p.m. nearly 2,000 boys assembled near Mysore Bank Circle and went in a procession to some of the areas in the neighbourhood and returned to the Mysore Bank Circle. On the way, Super Talkies and a few Tamil Cinema posters were pelted at. The miscreants were cleared from the place. Some of them also attempted to pull down baskets belonging to Tamilian coolies near the Market when they were dispersed. A crowd went near Sangam Theatre and pelted stones. Another group went to the Subhashnagar Bus Stand and started pelting stones at a bus of Tamil Nadu State. The police rushed to the place and chased away the crowd. Some of them went to the Railway track to obstruct the movement of trains and they were dispersed. Some boys set fire to two huts in the Railway Station compound. The Police and the Fire Birgade put out the fire and chased away the crowd. A few boys also set fire to the D.M.K. Flag near the Bus Stand. Some of the persons in the crowd rushed towards Okalipuram and set fire to two huts belonging to Tamilians. The Police and Fire Brigade put out the fire and averted the further trouble. Stones were also pelted at Vijayalakshmi Talkies in Chickpet and stray cases of stone throwing near the Railway Overbridge, Kempe Gowda Road, Balepet and Chowdeswari Temple Street were also reported. In the evening, some miscreants also resorted to throwing stones at moving cars on Kempe Gowda Road and in Gandhinagar. Eight cases under Section 143 I.P.C. etc., and two cases under Section 435 IPC have been registered and so far 10 persons have been arrested.

It is unfortunate that unsocial elements took law into their own hands and took advantage of the situation in order to create panic. I strongly deprecate the action of the miscreants. However, it will be realised that but for the timely action of the Police in all the affected areas, the situation would have gone completely out of control and considerable damage would have been caused to person and property. Recrudescence of trouble will be firmly dealt

with. All possible protection has been and is being given to all residents of the State irrespective of whether they belong to the majority language group or the Minority groups.

Just now I have received a message that some urchins near the Under Bridge, City Railway Station, and Seshadripuram, pelted stones and set fire to a hut near the Railway Station. Our Police Officers are on the spot handling the situation. This is the latest position at 3-15. P. M. today.

Statement of the Chief Minister *re*: the Arrest of Sri Vatal Nagaraj by Tamil Nadu Police

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಅಧ್ಯಕ್ಷರೇ, ಶ್ರೀಮಾನ್ ವಾಟಾಳ್ ನಾಗರಾಜಂರವರು ತಮಿಳುನಾಡಿನ ಪ್ರದೇಶದಲ್ಲಿ ಹೋಗಿ ಅಲ್ಲಿ ಇರುವಂಥ ಕಾನೂನನ್ನು ಉಲ್ಲಂಘನೆ ಮಾಡಿರುವುದರಿಂದ ಅವರನ್ನು ಬಂಧಿಸಲಾಯಿತು. ಅದರ ಮೇಲೆ ಈ ಮಾನ್ಯಸಭೆಯಲ್ಲಿ ಪ್ರಶ್ನೋತ್ತರಕಾಲವಾದ ಮೇಲೆ ಬಹುಶಃ ಎರಡು ಮೂರು ದಿವಸಗಳಿಂದ ಮೇಲಿಂದ ಮೇಲೆ ಇದರ ಮೇಲೆ ಚರ್ಚೆ ನಡೆಯುತ್ತಾ ಇದೆ. ಅವರನ್ನು ಬಂಧಿಸಿದ ಮಾರನೇ ದಿವಸ ಇಲ್ಲಿ ಕೆಲವು ಮಾನ್ಯಸದಸ್ಯರ ಮನಸ್ಸಿನಲ್ಲಿ ಒಂದು ಇಂಪ್ರೆಷನ್ ಇರಬಹುದು. ಅದೇನೆಂದರೆ, ತಮಿಳುನಾಡಿನ ಪೋಲೀಸಿನವರು ಮೈಸೂರಿನ ಜೂರಿಸ್‌ಡಿಕ್ಷನ್‌ನೊಳಗೆ ಬಂದು ಬಂಧಿಸಿದರು ಮತ್ತು ತಮಿಳುನಾಡಿನ ಜೂರಿಸ್‌ಡಿಕ್ಷನ್‌ಗೆ ಅವರು ಹೋಗದೇ ಇದ್ದರೂ ಅವರನ್ನು ಬಿಡಿದು ಒಯ್ದು ಹೆರಾಸ್‌ಮೆಂಟ್ ಮಾಡಿದ್ದಾರೆ ಎಂಬ ಇಂಪ್ರೆಷನ್ ಇದ್ದಂತೆ ಕಾಣುತ್ತದೆ. ಇದರಲ್ಲಿ ಅರ್ಥ ಏನೂ ಇಲ್ಲ. ನುಮಾರು 200–300 ಜನ ಅಥವಾ ಬಹಳಷ್ಟು ಜನ ಅವರ ಜೊತೆಯಲ್ಲಿ ಹೋಗಿದ್ದರು. ಚಾಮರಾಜ ನಗರದಿಂದ ತಾಳವಾಡಿಗೆ ಬಹುಶಃ 12–13 ಮೈಲಿ ಆಗುತ್ತದೆ. 9ನೇ ಮೈಲಿಯಿಂದ ಡೀವಿಯೇಷನ್ ರೋಡ್ ಬರುತ್ತದೆ ಅಂದಂದ ಒಂದೂವರೆ ಮೈಲಿಯಲ್ಲಿ ನಮ್ಮ ಬಾರ್ಡರ್ ಮತ್ತು ತಮಿಳುನಾಡು ಬಾರ್ಡರ್ ಸೇರುತ್ತದೆ. ತಮಿಳುನಾಡು ಬಾರ್ಡರ್‌ನಲ್ಲಿ ಒಂದೂವರೆ ಫರ್ಲಾಂಗ್ ಒಳಗಡೆ ಅವರೆಲ್ಲರೂ ಹೋಗಿದ್ದರು. ಅವರು ಹೋದ ಮೇಲೆ 144, 145 ಸೆಕ್ಷನ್ ಇದೆ, ಹೊರಟು ಹೋಗಿ ಎಂದು ಅನೇಕ ರೀತಿಯಿಂದ ಹೇಳಿದ್ದಾರೆ. ಆದರೆ ಅದನ್ನು ಕೇಳಲಾರದಂತೆ ಘೋಷಣೆ ಮಾಡಿಕೊಂಡು, ಏನೇನೋ ಮಾಡಿಕೊಂಡು ಯಾರ್ಯಾರು ಹೋಗಿದ್ದರೊ ಅವರು ಕಲ್ಲು ಹೊಡೆಯುವುದಕ್ಕೆ ಪ್ರಾರಂಭ ಮಾಡಿದರು. ಅಲ್ಲಿನ ಕೆಲವು ಆಫೀಸರುಗಳಿಗೂ ಪೆಟ್ಟು ಆಗಿದೆ. ಅದರ ಬಗ್ಗೆ ಇವತ್ತು ಹೇಳಬೇಕಾಗಿಲ್ಲ. ಏಕೆಂದರೆ ಈ ಘಟನೆ ಆಗಿದ್ದು ತಮಿಳುನಾಡು ಏರಿಯಾದಲ್ಲಿ ಆಗಿದೆಯೇ ಹೊರತು ಮೈಸೂರು ಏರಿಯಾದಲ್ಲಿ ಆಗಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ಅಧಿಕಾರಿಗಳೂ ಕೂಡ ಈ ಅಜಿಟೇಟರ್ಸ್ ಜೊತೆಯಲ್ಲಿ ನಮ್ಮ ಬಾರ್ಡರ್‌ವರೆಗೂ ಕೂಡ ಹೋಗಿದ್ದರು. ಏಕೆಂದರೆ ಅಲ್ಲಿ ಇಲ್ಲಿ ಏನಾದರೂ ಮಾಡಿಯಾರು ಅನ್ನುವ ದೃಷ್ಟಿಯಿಂದ. ಅದನ್ನು ನೋಡಿಕೊಳ್ಳುವುದಕ್ಕೆ ಕಾವಲು ಇದ್ದರು. ಆ ರೀತಿಯಿಂದ ಈ ಘಟನೆ ಏನು ಆಗಿದೆ ಇದು ತಮಿಳುನಾಡಿನ ಏರಿಯಾದಲ್ಲಿ ಆಗಿದೆಯೇ ಹೊರತು ಮೈಸೂರು ಏರಿಯಾದಲ್ಲಿ ಆಗಿಲ್ಲ. ಇದು ಆದಮೇಲೆ ಕಳೆದ ಎರಡು ದಿವಸಗಳಿಂದ ಬೆಂಗಳೂರು ನಗರದಲ್ಲಿ ಆದಂಥ ಘಟನೆಗಳು ಬಹುಶಃ ಯಾರಿಗೂ ಆದರಲ್ಲೂ ಕನ್ನಡಿಗರಿಗೆ ಕೀರ್ತಿ ತರುವಂತಹ ಘಟನೆ ಆಗಿಲ್ಲ ಎಂಬ ಮಾತನ್ನು ಬಹಳ ವಿಷಾದದಿಂದ ಹೇಳುತ್ತೇನೆ. ಬೆಂಗಳೂರಿನಲ್ಲಿ ತಮಗೆಲ್ಲರಿಗೂ ಗೊತ್ತಿದೆ, ಇದು ಕಾಸ್ಮೊಪಾಲಿಟಿನ್ ಸಿಟಿ. ಆ ದೃಷ್ಟಿಯಿಂದ ಪಾಪ್ಯುಲೇಷನ್ ನೋಡಿದರೆ ಇಲ್ಲಿ ತಮಿಳು ಪಾಪ್ಯುಲೇಷನ್ ಸಾಕಾದಷ್ಟು ಇದೆ. ಆ ದೃಷ್ಟಿಯಿಂದ ಈ ತರಹದ ಘಟನೆಗಳು ಇಲ್ಲಿ ಆಗಬಾರದಾಗಿತ್ತು. ಇದು ಬೆಂಗಳೂರು ನಗರಕ್ಕೆ ಒಂದು ಕುಂದು ಬಂದಂತಾಗಿದೆ. ನಗರದ ಕೀರ್ತಿಗೆ ಕುಂದು ಬಂದಂತೆ ಆಗಿದೆಯೆಂದು ಬಹಳ ವಿಷಾದದಿಂದ ಹೇಳುತ್ತೇನೆ. ಕಳೆದ ಎರಡು ದಿವಸಗಳಲ್ಲಿ ಏನು ಘಟನೆ ಆಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಒಂದು ಮಾತನ್ನು ಮರೆತೆ. ಯಾವಾಗ ಅವರನ್ನು ಬಂಧಿಸಿದರೋ ತಮಿಳುನಾಡು ಸರ್ಕಾರದವರು ಅದೇ ದಿವಸ ಅಥವಾ ಮಾರನೇ ದಿವಸ ನಾನು ಕರುಣಾನಿಧಿಯವರಿಗೆ ಕಾಗದ ಬರೆದು ಈ ರೀತಿಯಿಂದ ಬಂಧಿಸಿದ್ದಾರೆ, ಇದೇನೂ ಅಂತಹ ದೊಡ್ಡ ಅಫೆನ್ಸ್ ಅಲ್ಲ ಅವರಿಗೆ ಯಾವ